# ಉಪತಹಶೀಲ್ದಾರರು, ಹಿರೇಹಡಗಲಿ ಇವರ ನ್ಯಾಯಾಲಯದಲ್ಲಿ

| ಅರ್ಜಿದಾರರು | ತಕರಾರುದಾರರು |
|---|---|
| ಬಣಕಾರ ಕವಿತಾ ಗಂಡ ಪಂಚಾಕ್ಷರಿ ,<br>ಮಕರಬ್ಬಿ ಗ್ರಾಮ, ಹಡಗಲಿ ತಾ. | ಎ.ಶಿವಯೋಗಪ್ಪ ತಂದೆ ಚೆನ್ನಬಸಪ್ಪ ,<br>ತೆಲಗಿ ಗ್ರಾಮ, ಹರಪನಹಳ್ಳಿ ತಾ. |

ವಿವಾದಿತ ಜಮೀನಿನ ವಿವರ:

| ಕ್ರ.ಸಂ. | ಗ್ರಾಮದ ಹೆಸರು | ಸ.ನಂ. | ವಿಸ್ತೀರ್ಣ | ತರಹೆ |
|---|---|---|---|---|
| 1. | ಮಕರಬ್ಬಿ | 16/ಎ/2 | 1–32 | ಖುಷ್ಕಿ |
| 2. | ,, | 16/ಬಿ/2 | 0–39 | ,, |
| 3. | ,, | 16/ಬಿ/3ಸಿ | 1–70 | ,, |

**ಪೀಠಿಕೆ:–**

ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲೂಕಿನ ಮಕರಬ್ಬಿ ಗ್ರಾಮದ ಮೇಲ್ಕಂಡ ಜಮೀನಿಗೆ ಸಂಬಂಧಿಸಿದಂತೆ, ಮಕರಬ್ಬಿ ಗ್ರಾಮದ ನಿವಾಸಿಯಾದ ಬಣಕಾರ ಕವಿತಾ ಗಂಡ ಪಂಚಾಕ್ಷರಿ ಇವರು ದಿ:2–12–2012 ರಂದು ಮಾಡಿಕೊಂಡ ನೋಂದಣಿಯಾಗದ ಪಾಲುವಿಭಾಗ ಪತ್ರದ ಪ್ರಕಾರ ಹಕ್ಕು ಬದಲಾವಣೆ ಮಾಡಲು ಕೋರಿ ದಿ:17–1–2013 ರಂದು ಅರ್ಜಿ ಸಲ್ಲಿಸಿರುತ್ತಾರೆ. ಗ್ರಾಮದಲ್ಲಿ ನಮೂನೆ–21 ರ ನೋಟೀಸು ದಿ:31–1–2013 ರಂದು ಜಾರಿ ಮಾಡಲಾಗಿ, ನಿಗದಿತ ಅವಧಿಯೊಳಗೆ ಅಂದರೆ ದಿ:19–2–2013 ರಂದು ಎ.ಶಿವಯೋಗಪ್ಪ ತಂದೆ ಚೆನ್ನಬಸಪ್ಪ, ತೆಲಗಿ ಗ್ರಾಮ, ಹರಪನಹಳ್ಳಿ ತಾ. ಇವರು ತಕರಾರು ಅರ್ಜಿ ಸಲ್ಲಿಸಿರುತ್ತಾರೆ. ಕಾರಣ ಎಂ.ಆರ್.ಸಂಖ್ಯೆ 14/2012–13 ರ ಕಡತವು ತಕರಾರು ಕಡತವೆಂದು ಪರಿಗಣಿಸಿ ಕಂದಾಯ ನಿರೀಕ್ಷಕರು, ಹಿರೇಹಡಗಲಿ ರವರು ಈ ಕಾರ್ಯಾಲಯಕ್ಕೆ ವಿಚಾರಣೆಗೆ ಸಲ್ಲಿಸಿರುತ್ತಾರೆ. ಉಭಯ ಪಕ್ಷದವರಿಗೆ ಕೇಳಿಕೊಳ್ಳುವ ಅವಕಾಶ ನೀಡಿ ದಿ:27–6–2013 ಕ್ಕೆ ವಿಚಾರಣೆಗೆ ಹಾಜರಾಗಲು ನೋಟೀಸ್ ನೀಡಲಾಯಿತು.

ಅರ್ಜಿದಾರರು ಮಾತ್ರ ಒಮ್ಮೆ ಹಾಜರಾಗಿರುತ್ತಾರೆ. ಮತ್ತು ತಕರಾರುದಾರರು ಸದರಿ ಪ್ರಕರಣದ ವಿಚಾರಣೆಗೆ ಗೈರು ಹಾಜರಾಗಿರುತ್ತಾರೆ. ತದನಂತರ ಅರ್ಜಿದಾರರು ಮತ್ತು ತಕರಾರುದಾರರು ಸತತವಾಗಿ ಗೈರು ಹಾಜರಾಗಿರುತ್ತಾರೆ. ಅಂತಿಮ ನೋಟೀಸ್ ನೀಡಿದ್ದಾಗ್ಯೂ ಹಾಜರಾಗಿರುವುದಿಲ್ಲ. ಪ್ರಕರಣದಲ್ಲಿ ಲಭ್ಯ ದಾಖಲೆಗಳನ್ನು ಪರಿಶೀಲಿಸಲಾಯಿತು. ತಕರಾರುದಾರರು ತಮ್ಮ ಕೊಟ್ಟಿದ್ದು, ಕಾರಣಾಂತರದಿಂದ ಮರಣ ಹೊಂದಿದ ನಂತರ ಪಂಚಾಕ್ಷರಿ ಬಣಕಾರ ಇವರು ಎರಡನೆ ಮದುವೆಯಾದರು. ಈಗ ಕವಿತಾ ಇವರಿಗೆ ಮೇಲ್ಕಂಡ ಜಮೀನುಗಳನ್ನು ಖಾತೆ ಬದಲಾವಣೆ ಮಾಡಲು ಕೊಟ್ಟಿರುತ್ತಾರೆ. ಮೊದಲನೇ ಹೆಂಡತಿಗೆ 15 ವರ್ಷದ ಮಗನಾದ ಚಂದ್ರಶೇಖರ ಬಣಕಾರ ಇವರಿಗೆ ಪಾಲು ಆಗಬೇಕಿರುವುದರಿಂದ ಖಾತೆ ಬದಲಾವಣೆ ಮಾಡಬಾರದೆಂದು ತಕರಾರು ನೀಡಿರುತ್ತಾರೆ. ಪಾಲಿಗೆ ಸಂಬಂಧಿಸಿದಂತೆ ವಿವಾದ ಇರುವುದರಿಂದ ಇದು ಸಿವಿಲ್ ಅಂಶದಿಂದ ಕೂಡಿರುತ್ತದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸಂ/ಕಂ/ಪಹಣಿ/ವಿವಾದ/02/2013–14 ದಿನಾಂಕ:17–10–2016 .

## ಆದೇಶ

ಪೀಠಿಕೆಯಲ್ಲಿ ವಿವರಿಸಿದ ಅಂಶಗಳು ಹಾಗೂ ಕಾರಣಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 128 ಮತ್ತು 129 ರ ಪ್ರಕಾರ ಎಂ.ಆರ್.ಸಂಖ್ಯೆ 14/2012–13 ರ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ಆದೇಶಿಸಿದೆ. ಉಭಯರು ತಮ್ಮ ಹಕ್ಕನ್ನು ಸಿವಿಲ್ ನ್ಯಾಯಾಲಯದಲ್ಲಿ ಸ್ಥಿರಪಡಿಸಿಕೊಂಡು ಪರಿಹರ ಕಂಡುಕೊಳ್ಳಲು ಆದೇಶೀಸಿದೆ.

ಉಪ ತಹಶೀಲ್ದಾರರು,
ನಾಡ ಕಾರ್ಯಾಲಯ,
ಹಿರೇಹಡಗಲಿ.

ಪ್ರತಿಯನ್ನು

1. ವಾದಿ ಮತ್ತು ಪ್ರತಿವಾದಿಗಳಿಗೆ
2. ಭೂಮಿ ಕೇಂದ್ರ, ತಾಲೂಕು ಕಛೇರಿ, ಹೂವಿನಹಡಗಲಿ ಇವರಿಗೆ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.
3. ಕಛೇರಿ ಕಡತಕ್ಕೆ ಶುದ್ಧಪ್ರತಿ.